KASM620006902022

Presented on : 30-03-2022
Registered on : 30-03-2022
Decided on : 01-08-2026
Duration : 4 years, 4 months, 4 days

# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ.

: ಉಪಸ್ಥಿತರು :

**ಶ್ರೀ ಮಾದೇಶ ಎಂ.ವಿ.**, ಬಿ.ಕಾಂ., ಎಲ್.ಎಲ್.ಬಿ.
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಸಾಗರ.

ದಿನಾಂಕಃ 01 ನೇ ಆಗಸ್ಟ್ 2026

## ಅಸಲು ದಾವಾ ನಂ. 79 / 2022

**ವಾದಿಯರು** : 1. ಶಾಂತಮ್ಮ ಎನ್.ವೈ.
ಕೋಂ ನಂಜುಂಡಪ್ಪ ಯಾನೆ ನಂಜುಂಡ,
ವಯಸ್ಸು ಸುಮಾರು 48 ವರ್ಷ,

2. ಎನ್. ಸಂತೋಷ್
ಬಿನ್ ದಿ|| ನಂಜುಂಡಪ್ಪ ಯಾನೆ ನಂಜುಂಡ,
ವಯಸ್ಸು ಸುಮಾರು 24 ವರ್ಷ,

ಇಬ್ಬರ ವಾಸಃ ಹೇಮಾವತಿ ಬಡಾವಣೆ,

ನೊಣವಿನಕೆರೆ ಅಂಚೆ, ನೊಣವಿನಕೆರೆ ಹೋಬಳಿ,
ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ.

***(ಪ್ರತಿನಿಧಿಸುವವರು ಶ್ರೀ ಎಂ.ಎಸ್.ಜಿ., ವಕೀಲರು )***

–ವಿರುದ್ಧ–

**ಪ್ರತಿವಾದಿಯರು:** 1. ರಂಗಮ್ಮ ಕೋಂ ದಿ|| ಓಬೇಗೌಡ,
ವಯಸ್ಸು ಸುಮಾರು 75 ವರ್ಷ,

2. ಸುಜಾತ ಕೋಂ ದಿ|| ಪುಟ್ಟಓಬೇಗೌಡ ಯಾನೆ ತಿಮ್ಮಯ್ಯ,
ವಯಸ್ಸು ಸುಮಾರು 43 ವರ್ಷ,

ಇಬ್ಬರೂ ಮಾರುತಿ ವೈನ್ಸ್‌ಸ್ಟೋರ್ ನ ಮಾಲೀಕರು,
ಭಟ್ಕಳ ರಸ್ತೆ, ಕಾರ್ಗಲ್ ಟೌನ್,
ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

3 ಮಂಜುಳ ಕೋಂ ಕಣ್ಣಪ್ಪ,
ಬಿನ್ ದಿ|| ಓಬೇಗೌಡ,
ವಯಸ್ಸು ಸುಮಾರು 54 ವರ್ಷ,
ವಾಸಃ ಎಸ್.ವಿ.ಪಿ. ಕಾಲೋನಿ,
ಗಾರ್ಡನ್ ಹೌಸ್, ಜೋಗ,
ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

4 ಶಾಂತಮ್ಮ ಕೋಂ ದಿ|| ರೇವಣಸಿದ್ದಪ್ಪ,
ಬಿನ್ ದಿ|| ಓಬೇಗೌಡ,
ವಯಸ್ಸು ಸುಮಾರು 48 ವರ್ಷ,
ವಾಸಃ ಕರದಾಳು ಸಂತೆ ಮೈದಾನ,

ನೊಣವಿನಕೆರೆ ಹೋಬಳಿ,
ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ.

5 ಯಶವಂತ್ ಬಿನ್ ಪುಟ್ಟಓಬೇಗೌಡ,
ವಯಸ್ಸು ಸುಮಾರು 21 ವರ್ಷ,
ವಾಸಃ ಮಾರುತಿ ವೈನ್ ಸ್ಟೋರ್,
ಬಜಾರ್ ಲೈವ್, ಕಾರ್ಗಲ್ ಟೌನ್,
ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

***( 1 ರಿಂದ 3 ಮತ್ತು 5 ನೇ ಪ್ರತಿವಾದಿಯರ ಪರ–***
***ಶ್ರೀ ಟಿ.ಎಸ್.ಆರ್.,ವಕೀಲರು)***
***(4 ನೇ ಪ್ರತಿವಾದಿ–ಏಕಪಕ್ಷೀಯರಾಗಿರುತ್ತಾರೆ)***

| | | |
|---|---|---|
| ದಾವೆಯನ್ನು ಹೂಡಿದ ದಿನಾಂಕ | : | 30–03–2022 |
| ದಾವೆಯ ಸ್ವರೂಪ | : | ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆ |
| ಸಾಕ್ಷಿಗಳನ್ನು ವಿಚಾರಣೆ ಮಾಡಲು ಪಾರಂಭಿಸಿದ ದಿನಾಂಕ | : | 18–07–2024 |
| ತೀರ್ಪನ್ನು ಉಚ್ಚರಿಸಿದ ದಿನಾಂಕ | : | 01–08–2026 |
| ಒಟ್ಟು ಅವಧಿ | : | ವರ್ಷಗಳು/ತಿಂಗಳು/ದಿನಗಳು<br>4 4 4 |

(**ಮಾದೇಶ ಎಂ.ವಿ**.,)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಾಗರ.

## ತೀರ್ಪು

ಪ್ರಸ್ತುತ ದಾವೆಯನ್ನು ವಾದಿಯು, ಪ್ರತಿವಾದಿಯರ ವಿರುದ್ಧ ದಾವಾ ಸ್ವತ್ತುಗಳ ಕುರಿತು ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನ ಕೋರಿ ಸಲ್ಲಿಸಿರುತ್ತಾರೆ.

## ದಾವಾ ಶೆಡ್ಯೂಲ್ ಗಳು

1. ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕು, ಕಾರ್ಗಲ್, ಮೇನ್ ಬಜಾರ್ ನ 513 ನೇ ನಂಬರಿನ ಜಾಗದಲ್ಲಿ ನಡೆಸುತ್ತಿರುವ ಮದ್ಯದ ಮಳಿಗೆಯ ಅಬಕಾರಿ ಪರವಾನಿಗೆ ನಂಬರ್. ಇ.ಎಕ್ಸ್.ಇ. 2404030003 ಸಿ.ಎಲ್-2, 1999-2000 ಇದಕ್ಕೆ ಚೆಕ್ಕುಬಂಧಿಃ

ಪೂರ್ವಕ್ಕೆಃ ಕ್ರಿಶ್ಚಯನ್ ರ ಮನೆ.

ಪಶ್ಚಿಮಕ್ಕೆಃ ಮನೋಜ್ ರವರ ಪಂಚರ್ ಶಾಪ್.

ಉತ್ತರಕ್ಕೆಃ ಭಟ್ಕಳದ ರಸ್ತೆ.

ದಕ್ಷಿಣಕ್ಕೆಃ ತೋಟ.

2. ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕು, ಕಾರ್ಗಲ್ ನಲ್ಲಿರುವ ಖಾತಾ ನಂಬರ್440-56 ವಿಸ್ತೀರ್ಣ ಪೂರ್ವ-ಪಶ್ಚಿಮ-8.70 ಮತ್ತು ಉತ್ತರ-ದಕ್ಷಿಣ 9.30 ಮೀಟರ್ ನ ನಿವೇಶನ ಹಾಗೂ ಇದರಲ್ಲಿ ತಿರುಮಲ ಹೋಟೆಲ್ ಮತ್ತು ರೆಸ್ಟೋರೆಂಟ್ ನಡೆಸುತ್ತಿದ್ದು, ಇದಕ್ಕೆ ಚೆಕ್ಕುಬಂಧಿಃ

ಪೂರ್ವಕ್ಕೆಃ ಮಿಥುನ್ ರವರ ಸ್ವತ್ತು.

ಪಶ್ಚಿಮಕ್ಕೆಃ ಮಂಜುಳ ರವರ ಸ್ವತ್ತು.

ಉತ್ತರಕ್ಕೆ: ಭಟ್ಕಳದ ರಸ್ತೆ.

ದಕ್ಷಿಣಕ್ಕೆ: ವೈ. ಮಾಲಿನಿ ರವರ ಸ್ವತ್ತು.

ಈ ಮೇಲ್ಕಂಡ ಶೆಡ್ಯೂಲ್ ನಲ್ಲಿ ಕಾಣಿಸಿದ ಸ್ವತ್ತುಗಳು ಈ ದಾವೆಯ ವಸ್ತುವಿಷಯವಾಗಿದ್ದು, ಇನ್ನು ಮುಂದೆ ದಾವಾ ಸ್ವತ್ತುಗಳು ಎಂದು ಸಂಭೋಧಿಸಲಾಗಿದೆ.

3. **<u>ವಾದಿಯ ವಾದಪತ್ರದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ.</u>**

ವಾದಿ ಮತ್ತು ಪ್ರತಿವಾದಿಯರು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರಾಗಿರುತ್ತಾರೆ. 1 ನೇ ಪ್ರತಿವಾದಿಯು ಮೃತ ಓಬೇಗೌಡ ರವರ ಪತ್ನಿಯಾಗಿರುತ್ತಾರೆ. ಸದರಿ 1 ನೇ ಪ್ರತಿವಾದಿ ಮತ್ತು ಓಬೇಗೌಡರವರಿಗೆ ಇಬ್ಬರು ಗಂಡು ಮಕ್ಕಳು ಹಾಗೂ ಇಬ್ಬರೂ ಹೆಣ್ಣು ಮಕ್ಕಳು. ಅವರೆಂದರೆ, 1 ನೇ ವಾದಿಯ ಗಂಡ ಹಾಗೂ 2 ನೇ ವಾದಿಯ ತಂದೆ ಮೃತ ನಂಜುಂಡ ಯಾನೆ ನಂಜುಂಡಪ್ಪ ಹಾಗೂ 2 ನೇ ಪ್ರತಿವಾದಿಯ ಗಂಡ ಪುಟ್ಟಓಬೇಗೌಡ. ಸದರಿ ದಂಪತಿಗಳ ಹೆಣ್ಣು ಮಕ್ಕಳು ಮಂಜುಳ ಮತ್ತು ಶಾಂತಮ್ಮ ಅಂದರೆ, ಈ ದಾವೆಯ 3 ಮತ್ತು 4 ನೇ ಪ್ರತಿವಾದಿಯರು. 5 ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ಮಗ. ಮೃತ ಓಬೇಗೌಡ, ನಂಜುಂಡಪ್ಪ ಮತ್ತು ಪುಟ್ಟಓಬೇಗೌಡರವರ ಜೀವಿತ ಕಾಲದಲ್ಲಿ ಅಥವಾ ಅವರು ಮೃತಪಟ್ಟ ನಂತರದಲ್ಲಿ ವಾದಿ ಮತ್ತು ಪ್ರತಿವಾದಿಯರ

ಕುಟುಂಬದಲ್ಲಿ ವಿಭಾಗವಾಗಿರುವುದಿಲ್ಲ. ದಾವಾ ಸ್ವತ್ತುಗಳು ವಾದಿ ಮತ್ತು ಪ್ರತಿವಾದಿಯರ ಜಂಟಿ ಸ್ವಾಧೀನಾನುಭವದಲ್ಲಿವೆ.

4. ದಾವಾ ಐಟಂ 1 ರ ಸ್ವತ್ತು ಮಾರುತಿ ವೈನ್ ಸ್ಟೋರ್ ಎಂಬ ಮಧ್ಯದ ಅಂಗಡಿಯಾಗಿದ್ದು, ದಾವಾ ಐಟಂ 2 ಮಾಂಸಹಾರಿ ಹೋಟೆಲ್ ಆಗಿದ್ದು, ಇವು ವಾದಿ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಪಿತ್ರಾರ್ಜಿತ ಸ್ವತ್ತುಗಳಾಗಿದ್ದು, ಈವರೆಗೆ ಸದರಿ ಸ್ವತ್ತುಗಳು ವಾದಿ ಮತ್ತು ಪ್ರತಿವಾದಿಯರ ಜಂಟಿ ಸ್ವಾಧೀನಾನುಭದಲ್ಲಿವೆ. ದಾವಾ ಐಟಂ 1 ರ ಮೂಲ ಪರವಾನಿಗೆಯನ್ನು ಅಬಕಾರಿ ಉಪ ಆಯುಕ್ತರು ದಿನಾಂಕಃ 30.06.2001 ರಂದು ನೀಡಿದ್ದು, ದಾವಾ ಐಟಂ 1 ರಲ್ಲಿ ಶರಾವತಿ ಬಾರ್ ಅಂಡ್ ರೆಸ್ಟೋರಂಟ್ ನ್ನು ಮೃತ ಓಬೇಗೌಡನು ನಡೆಸುತ್ತಿದ್ದು, 1990 ರಲ್ಲಿ ಸದರಿ ಓಬೇಗೌಡನು ಮೃತಪಟ್ಟ ನಂತರ ಸದರಿ ದಾವಾ ಐಟಂ 1 ರ ಪರವಾನಿಗೆಯನ್ನು 1 ನೇ ಪ್ರತಿವಾದಿಗೆ ವರ್ಗಾವಣೆ ಮಾಡಲಾಗಿರುತ್ತದೆ. 1 ನೇ ವಾದಿಯ ಗಂಡ ನಂಜುಂಡಪ್ಪ ದಾವಾ ಸ್ವತ್ತುಗಳ ಆಗು-ಹೋಗುಗಳನ್ನು ನೋಡಿಕೊಳ್ಳುತ್ತಿದ್ದನು. ಸದರಿ ನಂಜುಂಡಪ್ಪನು ರಸ್ತೆ ಅಪಘಾತದಲ್ಲಿ ಗಾಯಗೊಂಡು 10 ದಿನಗಳವರೆಗೆ ಚಿಕಿತ್ಸೆ ಪಡೆದು, ಚಿಕಿತ್ಸೆ ಫಲಕಾರಿಯಾಗದೇ ದಿನಾಂಕಃ05.09.1999 ರಂದು ಶಿವಮೊಗ್ಗದ ನಂಜಪ್ಪ ಆಸ್ಪತ್ರೆಯಲ್ಲಿ ಮೃತಪಟ್ಟ ನಂತರ, 2 ನೇ ಪ್ರತಿವಾದಿಯ ಗಂಡ ದಾವಾ ಸ್ವತ್ತುಗಳ ವ್ಯವಹಾರವನ್ನು ನಡೆಸಿಕೊಂಡು ಬರುತ್ತಿದ್ದನು. ದಿನಾಂಕಃ 17.01.2022 ರಂದು

2 ನೇ ಪ್ರತಿವಾದಿಯ ಗಂಡನು ಸಹ ಮೃತಪಟ್ಟಿರುತ್ತಾನೆ. ಸದರಿರವರ ಮರಣದ ನಂತರ ಪ್ರತಿವಾದಿಯರು ಕುಟುಂಬದ ವ್ಯವಹಾರಗಳನ್ನು ಸರಿಯಾಗಿ ನಿರ್ವಹಣೆ ಮಾಡದೇ ದಾವಾ ಸ್ವತ್ತುಗಳ ಆದಾಯವನ್ನು ದುಂದು ವೆಚ್ಚ ಮಾಡುತ್ತಾ, ಲೆಕ್ಕ ಪತ್ರಗಳನ್ನು ವಾದಿಗೆ ನೀಡದ ಕಾರಣ, ದಾವಾ ಸ್ವತ್ತುಗಳಲ್ಲಿನ ತಮ್ಮ 1/5 ನೇ ಹಿಸ್ಸೆಯನ್ನು ವಿಂಗಡಿಸಿಕೊಂಡುವಂತೆ ಕೋರಿರುತ್ತಾರೆ. ಪ್ರಾರಂಭದಲ್ಲಿ ವಾದಿಯರ ಹಿಸ್ಸೆಯನ್ನು ವಿಂಗಡಿಸಿಕೊಂಡುವುದಾಗಿ ಪ್ರತಿವಾದಿಯರು ಒಪ್ಪಿಕೊಂಡರೂ ಸಹ, ನಂತರದಲ್ಲಿ ವಾದಿಯರ ಹಿಸ್ಸೆಯನ್ನು ನಿರಾಕರಿಸಿ, ಶಿವಮೊಗ್ಗದ ಶಂಕರಪ್ಪ ಎನ್ನುವವರಿಗೆ ದಾವಾ ಆಸ್ತಿಗಳನ್ನು ಮಾರಾಟ ಮಾಡಲು ಪ್ರಯತ್ನಿಸುತ್ತಿರುವುದಾಗಿ ವಾದಿಯರಿಗೆ ತಿಳಿದು ಬಂದಿರುತ್ತದೆ. ಸದರಿ ಸ್ವತ್ತುಗಳನ್ನು ಮಾರಾಟ ಮಾಡಲು ಪ್ರತಿವಾದಿಯರಿಗೆ ಯಾವುದೇ ಹಕ್ಕು ಇರುವುದಿಲ್ಲ. ಈ ದಾವೆಯನ್ನು ದಾಖಲಿಸಿದ 15 ದಿನಗಳ ಹಿಂದೆ ಮತ್ತು ಪ್ರತಿವಾದಿಯರು ದಾವಾ ಸ್ವತ್ತುಗಳಲ್ಲಿರುವ ವಾದಿಯರ ಹಿಸ್ಸೆಯನ್ನು ನಿರಾಕರಿಸಿದಾಗ, ಪ್ರಸ್ತುತ ದಾವೆಗೆ ವ್ಯಾಜ್ಯ ಕಾರಣ ಉಂಟಾಗಿರುತ್ತದೆ. ಆದ್ದರಿಂದ, ತಮ್ಮ ದಾವೆಯನ್ನು ಪುರಸ್ಕರಿಸಿ ದಾವಾ ಆಸ್ತಿಗಳಲ್ಲಿರುವ ತಮ್ಮ 1/5 ನೇ ಹಿಸ್ಸೆಯನ್ನು ವಿಂಗಡಿಸಿ ಕೊಡುವಂತೆ ವಾದಿಯರು ಕೋರಿದ್ದಾರೆ.

5. ದಾವಾ ಸಮನ್ಸ್ ಜಾರಿಯಾದ ನಂತರ, 1 ರಿಂದ 3 ಮತ್ತು 5 ನೇ ಪ್ರತಿವಾದಿಯರು ತಮ್ಮ ವಕೀಲರ ಮೂಲಕ ನ್ಯಾಯಾಲಯದ ಮುಂದೆ ಹಾಜರಾಗಿರುತ್ತಾರೆ. 4 ನೇ ಪ್ರತಿವಾದಿಯು ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ,

ಸದರಿಯವರನ್ನು ಏಕಪಕ್ಷೀಯವಾಗಿರಿಸಲಾಗಿದೆ. 1 ರಿಂದ 3 ಮತ್ತು 5 ನೇ ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರದಲ್ಲಿ, ವಾದಿಯರು ಹಾಗೂ ತಮ್ಮ ಮತ್ತು 4 ನೇ ಪ್ರತಿವಾದಿಯ ನಡುವಿನ ಸಂಬಂಧವನ್ನು ಒಪ್ಪಿಕೊಂಡಿದ್ದು, ಉಳಿದ ಎಲ್ಲಾ ಸಂಗತಿಗಳನ್ನು ನಿರ್ದಿಷ್ಟವಾಗಿ ಅಲ್ಲಗಳೆದಿರುತ್ತಾರೆ.

6. **1 ಮತ್ತು 2 ನೇ ಪ್ರತಿವಾದಿಯರು ಹೇಳುವಂತೆ ವಾಸ್ತವಿಕ ಸಂಗತಿಗಳು ಈ ಕೆಳಕಂಡಂತಿರುತ್ತವೆ.**

ದಾವಾ ಐಟಂ 1 ರ ಸ್ವತ್ತು ಕರ್ನಾಟಕ ಅಬಕಾರಿ ಕಾಯಿದೆಯಡಿಯಲ್ಲಿ ಮದ್ಯದ ಮಾರಾಟಕ್ಕಾಗಿ ನೀಡಿದ ಸಿ.ಎಲ್ 2 ರ ಪರವಾನಿಗೆಯಾಗಿದ್ದು, ಅದನ್ನು 1 ನೇ ಪ್ರತಿವಾದಿಯ ಹೆಸರಿಗೆ ನೀಡಲಾಗಿರುತ್ತದೆ. ಆದ್ದರಿಂದ, ಸದರಿ ದಾವಾ ಐಟಂ 1 ರ ಸ್ವತ್ತು 1 ನೇ ಪ್ರತಿವಾದಿಯ ಸ್ವಯಾರ್ಜಿತ ಮತ್ತು ಪ್ರತ್ಯೇಕ ಸ್ವತ್ತಾಗಿದ್ದು, ವಾದಿ ಮತ್ತು ಉಳಿದ ಪ್ರತಿವಾದಿಯರಿಗೆ ಸದರಿ ಸ್ವತ್ತಿನಲ್ಲಿ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ.

7. ದಾವಾ ಐಟಂ 2 ರ ಸ್ವತ್ತನ್ನು ದಿನಾಂಕಃ 07.11.1998 ರಂದು 1 ನೇ ವಾದಿಯು ಶ್ರೀಮತಿ ಸರೋಜಮ್ಮ ಹಾಗೂ ಇತರರಿಂದ ಕ್ರಯದಪತ್ರದ ಮೂಲಕ ಖರೀದಿ ಮಾಡಿದ್ದರು. ನಂತರ 1 ನೇ ವಾದಿಯು ಸದರಿ ದಾವಾ ಐಟಂ 2 ರ ಸ್ವತ್ತನ್ನು 2 ನೇ ಪ್ರತಿವಾದಿಯ ಗಂಡ ಪುಟ್ಟಓಬೇಗೌಡನಿಗೆ ದಿನಾಂಕಃ 21.05.2003 ರಂದು ನೋಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ್ದು, ಸದರಿ ಕ್ರಯ ಪತ್ರದಂತೆ 2 ನೇ ಪ್ರತಿವಾದಿಯ ಗಂಡನು ಸದರಿ ಸ್ವತ್ತಿನ ಮಾಲೀಕನಾಗಿ

ಸ್ವಾಧೀನಾನುಭವದಲ್ಲಿದ್ದನು. ಪುಟ್ಟಓಬೇಗೌಡನ ಮರಣದ 2 ಮತ್ತು 5 ನೇ ಪ್ರತಿವಾದಿಯರು ಮೃತನ ವಾರಸುದಾರರಾಗಿ ದಾವಾ ಐಟಂ 2 ನ್ನು ಅರ್ಜಿಸಿ, ಸದರಿ ಸ್ವತ್ತಿನ ಮಾಲೀಕರಾಗಿ ಸ್ವಾಧೀನಾನುಭವದಲ್ಲಿರುತ್ತಾರೆ. ಆದ್ದರಿಂದ, ದಾವಾ ಐಟಂ 2 ರಲ್ಲಿ ವಾದಿ ಮತ್ತು ಇತರೆ ಪ್ರತಿವಾದಿಯರಿಗೆ ಯಾವುದೇ ಹಕ್ಕು ಮತ್ತು ಸ್ವಾಧೀನ ಇರುವುದಿಲ್ಲ. 1 ನೇ ವಾದಿಯು ದಿನಾಂಕಃ 21.05.2003 ರಂದು ದಾವಾ ಐಟಂ 2 ರ ಸ್ವತ್ತನ್ನು 2 ನೇ ಪ್ರತಿವಾದಿಯ ಗಂಡನ ಪರವಾಗಿ ಮಾರಾಟ ಮಾಡಿರುವುದರಿಂದ, ಸದರಿ ಸ್ವತ್ತಿನಲ್ಲಿನ ಹಕ್ಕನ್ನು ವಾದಿಯರು ಕಳೆದುಕೊಂಡಿರುತ್ತಾರೆ. ಆದ್ದರಿಂದ, ವಿಭಾಗಕ್ಕಾಗಿ ಸಲ್ಲಿಸಿರುವ ಈ ದಾವೆಯು ಕಾನೂನಿನಡಿಯಲ್ಲಿ ಊರ್ಜಿತವಾಗತಕ್ಕದ್ದಲ್ಲ ಮತ್ತು ಸದರಿ ದಾವೆಯು ಕಾಲ ಪರಿಮಿತಿ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಪ್ರತಿಷೇಧಿಸಲ್ಪಟ್ಟಿರುವುದರಿಂದ, ಸದರಿ ದಾವೆಯನ್ನು ಪರಿಹಾರಾತ್ಮಕ ವೆಚ್ಚಗಳೊಂದಿಗೆ ವಜಾಗೊಳಿಸಬೇಕೆಂದು ಕೋರಿದ್ದಾರೆ.

8. ಉಭಯ ಪಕ್ಷಗಾರರು ಸಲ್ಲಿಸಿರುವ ವಾದ ಮತ್ತು ಪ್ರತಿವಾದ ಪತ್ರಗಳನ್ನು ಪರಿಶೀಲಿಸಿದ ನಂತರ, ನ್ಯಾಯಾಲಯವು ವಿವಾದಾಂಶಗಳನ್ನು ರೂಪಿಸಿರುತ್ತದೆ.

## **ISSUES**

1. Whether the plaintiffs prove that, the suit a schedule properties are the ancestral

property of themselves and defendants ?

2. Whether the defendants prove that, item No. 1 of the suit schedule property is self acquired property of defendant No.1?

3. Whether the defendants prove that, item No. 2 of the suit schedule property is self acquired property of defendant No.2?

4. Whether the defendants prove that suit of plaintiffs is barred by law of limitation?

5. Whether the plaintiffs are entitled for the reliefs as sought for?

6. What order or decree?

9. ವಾದಿಯ ವಾದಪತ್ರದಲ್ಲಿ ಹೇಳಿರುವ ಸಂಗತಿಗಳನ್ನು ಸಾಭೀತು ಪಡಿಸಲು, 1 ನೇ ವಾದಿಯು ತನ್ನನ್ನು ತಾನು ಪಿ.ಡಬ್ಲೂ–1 ಎಂದು ವಿಚಾರಣೆಗೆ ಒಳಪಡಿಸಿಕೊಂಡು, ಸದರಿ ಪ್ರಮಾಣ ಪತ್ರದಲ್ಲಿ ತನ್ನ ವಾದ ಪತ್ರದ ಅಂಶಗಳನ್ನು ಪುನರುಚ್ಚರಿಸುತ್ತಾರೆ. ತನ್ನ ಪ್ರಮಾಣ ಪತ್ರದ ಸಾಕ್ಷ್ಯಕ್ಕೆ ಪೂರಕವಾಗಿ, ವಾದಿಯು ನಿ.ಪಿ–1 ರಿಂದ 8 ರ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. 2 ನೇ ಪ್ರತಿವಾದಿಯು ತನ್ನನ್ನು ತಾನು ಡಿ.ಡಬ್ಲೂ–1 ಎಂದು ವಿಚಾರಣೆಗೆ

ಒಳಪಡಿಸಿಕೊಂಡು, ತಮ್ಮ ಸಾಕ್ಷ್ಯದಲ್ಲಿ ತಮ್ಮ ಪ್ರತಿವಾದ ಪತ್ರದ ಅಂಶಗಳನ್ನು ಪುನರುಚ್ಚರಿಸುತ್ತಾರೆ. ತಮ್ಮ ಪ್ರಮಾಣ ಪತ್ರದ ಸಾಕ್ಷ್ಯಕ್ಕೆ ಪೂರಕವಾಗಿ, ನಿ.ಡಿ-1 ರಿಂದ 5 ರ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

10. ಪಕ್ಷಗಾರರು ಸಲ್ಲಿಸಿರುವ ವಾದ ಮತ್ತು ಪ್ರತಿವಾದ ಪತ್ರಗಳನ್ನು ಮತ್ತು ನ್ಯಾಯಾಲಯದ ಸಮಕ್ಷಮದಲ್ಲಿರುವ, ಈ ದಾವೆಗೆ ಸಂಬಂಧಿಸಿದಂತೆ ಲಭ್ಯವಿದ್ದ ಎಲ್ಲಾ ಸಾಕ್ಷಾಧಾರಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ, ಉಭಯ ಪಕ್ಷಗಾರರ ವಾದವನ್ನು ಆಲಿಸಿದ ನಂತರ, ಮೇಲಿನ ವಿವಾದಾಂಶಗಳಿಗೆ ನ್ಯಾಯಾಲಯದ ಉತ್ತರವು ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| ವಿವಾದಾಂಶ 1 | : | **ನಕಾರಾತ್ಮಕವಾಗಿ.** |
| ವಿವಾದಾಂಶ 2 ಮತ್ತು 3 | : | **ಸಕಾರಾತ್ಮಕವಾಗಿ.** |
| ವಿವಾದಾಂಶ 4 ಮತ್ತು 5 | : | **ನಕಾರಾತ್ಮಕವಾಗಿ.** |
| ವಿವಾದಾಂಶ 6 | : | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ, |

## ಕಾ ರ ಣ ಗ ಳು

11. **ವಿವಾದಾಂಶ 1 ರಿಂದ 3:** ಈ ಮೂರು ವಿವಾದಾಂಶಗಳು ಒಂದಕ್ಕೊಂದು ಸಂಬಂಧ ಹೊಂದಿರುವುದರಿಂದ, ವಾಕ್ಯಗಳ ಪುನರಾವರ್ತನೆಯನ್ನು ತಪ್ಪಿಸಲು ಇವುಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ವಿವಾದಾಂಶ 1 ರಂತೆ ವಾದಿಯರು ದಾವಾ ಸ್ವತ್ತುಗಳು ತಮ್ಮ ಹಾಗೂ ಪ್ರತಿವಾದಿಯರ ಒಟ್ಟು ಕುಟುಂಬದ ಸ್ವತ್ತುಗಳು ಎಂಬುದಾಗಿ ತಮ್ಮ ವಾದಪತ್ರದಲ್ಲಿ ಹೇಳಿದ್ದಾರೆ. ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರದಲ್ಲಿ ದಾವಾ ಐಟಂ 1 ರ ಸ್ವತ್ತು 1 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಎಂದು ಹಾಗೂ ದಾವಾ ಐಟಂ 2 ರ ಸ್ವತ್ತು 2 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಎಂದು ಪ್ರತಿರಕ್ಷೆ ತೆಗೆದುಕೊಂಡಿದ್ದಾರೆ. ಅದೇರೀತಿಯಾಗಿ, ವಾದಿಯು ಸಲ್ಲಿಸಿರುವ ಈ ದಾವೆಗೆ ಅವಧಿ ಬಾಧಕವಿರುತ್ತದೆ. ಏಕೆಂದರೆ, ದಿನಾಂಕಃ 21.05.2003 ರಂದು 1 ನೇ ವಾದಿಯು 2 ನೇ ಪ್ರತಿವಾದಿಯ ಗಂಡನಿಗೆ ದಾವಾ ಐಟಂ 2 ರ ಸ್ವತ್ತಿನ ಕುರಿತು ನೋಂದಾಯಿತ ಕ್ರಯಪತ್ರವನ್ನು ಬರೆದುಕೊಟ್ಟಿರುತ್ತಾರೆ. ನಂತರ, ಈ ದಾವೆಯನ್ನು ಸಲ್ಲಿಸುವವರೆಗೆ ಸದರಿ ವಾದಿಯು ದಾವಾ ಐಟಂ 2 ರ ಸ್ವತ್ತಿನ ಕ್ರಯಪತ್ರದ ಕುರಿತು ಸೂಕ್ತ ಪ್ರಾಧಿಕಾರದ ಮುಂದೆ ಪ್ರಶ್ನಿಸಿರುವುದಿಲ್ಲ. ಆದರೂ ಸಹ ಸದರಿ ದಾವಾ ಸ್ವತ್ತುಗಳು ತಮ್ಮ ಒಟ್ಟು ಕುಟಂಬದ ಸ್ವತ್ತುಗಳು ಹೇಳಿ ಸಲ್ಲಿಸಿರುವ ಈ ದಾವೆಗೆ ಅವಧಿ ಬಾಧಕವಿದೆ ಎಂಬುದಾಗಿ ಪ್ರತಿರಕ್ಷೆ ತೆಗೆದುಕೊಂಡಿದ್ದಾರೆ.

12. ವಾದಿಯು ತನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದಲ್ಲಿ ವಾದ ಪತ್ರಗಳಲ್ಲಿನ ಎಲ್ಲಾ ಸಂಗತಿಗಳನ್ನು ಪುನರುಚ್ಛರಿಸಿದ್ದಾರೆ. ಅದೇರೀತಿಯಾಗಿ, ಸದರಿ ವಾದಿಯು ತನ್ನ ಹೆಚ್ಚುವರಿ ಮುಖ್ಯ ವಿಚಾರಣಾ

ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದಲ್ಲಿ ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರಗಳಲ್ಲಿ ಹೇಳಿದ ಎಲ್ಲಾ ಸಂಗತಿಗಳನ್ನು ನಿರ್ದಿಷ್ಟವಾಗಿ ಅಲ್ಲಗಳೆದಿದ್ದಾರೆ. ವಾದಿ ಮತ್ತು ಪ್ರತಿವಾದಿಯರ ನಡುವೆ ತಮ್ಮ ತಮ್ಮ ನಡುವಿನ ಸಂಬಂಧದ ಕುರಿತು ಯಾವುದೇ ವಿವಾದ ಇರುವುದಿಲ್ಲ. ಆದ್ದರಿಂದ, ಸದರಿ ಪಕ್ಷಗಾರರ ಸಂಬಂಧದ ಕುರಿತು ಚರ್ಚಿಸುವ ಯಾವುದೇ ಅಗತ್ಯ ಇರುವುದಿಲ್ಲ.

13. ದಾವಾ ಐಟಂ 1 ರ ಸ್ವತ್ತು ತಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿ ಎಂಬುದಾಗಿ ವಾದಿಯರು ತಮ್ಮ ವಾದ ಪತ್ರದಲ್ಲಿ ಹೇಳಿದ್ದು, 1 ನೇ ಪ್ರತಿವಾದಿಯು ಸದರಿ ಆಸ್ತಿಯು ತನ್ನ ಸ್ವಯಾರ್ಜಿತ ಆಸ್ತಿ ಎಂದು ಸಾಧನೆ ಮಾಡಿದ್ದಾರೆ. ದಾವಾ ಐಟಂ 1 ರ ಸ್ವತ್ತು ಮದ್ಯದ ಮಳಿಗೆಯಾಗಿದ್ದು, ಸದರಿ ಸ್ವತ್ತು ಅಬಕಾರಿ ಇಲಾಖೆಯವರು ಮದ್ಯವನ್ನು ಮಾರಾಟ ಮಾಡಲು ನೀಡಿರುವ ಸಿ.ಎಲ್-2 ಪರವಾನಿಗೆಯಾಗಿರುತ್ತದೆ. ಇದಕ್ಕೆ ಸಂಬಂಧಪಟ್ಟಂತೆ, ವಾದಿಯು ನಿ.ಪಿ. 1 ರಿಂದ 5 ರವರೆಗಿನ ದಾಖಲೆಗಳನ್ನು ಹಾಜರುಪಡಿಸಿದ್ದಾರೆ. ನಿ.ಪಿ.1 ಇದು ನಮೂನೆ-6 ರ ಪ್ರತಿಯಾಗಿದ್ದು, ಸದರಿ ದಾಖಲೆಯಂತೆ ಕಾರ್ಗಲ್ ಪಟ್ಟಣದಲ್ಲಿ 1991-92 ರ ಸಾಲಿನಲ್ಲಿ ಮಾರುತಿ ವೈನ್ಸ್ ಎಂಬ ಹೆಸರಿನಲ್ಲಿ ನಡೆಸುತ್ತಿದ್ದ ಮದ್ಯ ಮಾರಾಟ ಅಂಗಡಿಯ ವಾಣಿಜ್ಯ ತೆರಿಗೆ ದಾಖಲೆಯಾಗಿರುತ್ತದೆ. ನಿ.ಪಿ.2 ನಮೂನೆ-ಸಿ.ಎಲ್-2 ನ ಪರವಾನಿಗೆಯಾಗಿರುತ್ತದೆ. ಸದರಿ ಪರವಾನಿಗೆಯನ್ನು 1 ನೇ

ಪ್ರತಿವಾದಿಯ ಗಂಡ ಎಂ. ಲಕ್ಷ್ಮಿನಾರಾಯಣ ರವರಿಗೆ ಹೆಸರಿಗೆ ಸ್ವದೇಶಿ ಮದ್ಯ ಹಾಗೂ ವಿದೇಶಿ ಮದ್ಯ ಎರಡು ಸೇರಿ ಮಾರಾಟ ನೀಡಲಾಗಿತ್ತು. ಸದರಿ ಪರವಾನಿಗೆಯ ಅವಧಿ ಮುಗಿಯುವ ಮೊದಲೇ 1 ನೇ ಪ್ರತಿವಾದಿಯ ಗಂಡ ಮೃತಪಟ್ಟಿದ್ದರಿಂದ, ದಿನಾಂಕಃ 30.06.2000 ನೇ ಸಾಲಿನವರೆಗೆ ಮದ್ಯ ಮಾರಾಟ ನಡೆಸಲು 1 ನೇ ಪ್ರತಿವಾದಿಯ ಹೆಸರಿಗೆ ನಿ.ಪಿ.2 ರ ಪರವಾನಿಗೆಯನ್ನು ನೀಡಿ, ಜಿಲ್ಲಾಧಿಕಾರಿಗಳು (ಅಬಕಾರಿ ಶಿವಮೊಗ್ಗ) ರವರು ಆದೇಶಿಸಿರುತ್ತಾರೆ. ನಿ.ಪಿ.3 ಸದರಿ ಮದ್ಯದ ಅಂಗಡಿಯ ಫೋಟೊ ಆಗಿರುತ್ತದೆ. ನಿ.ಪಿ.4 ರ ದಾಖಲೆಯು 2 ನೇ ಪ್ರತಿವಾದಿಯ ಗಂಡನ ವೈಕುಂಠ ಸಮಾರಾಧನೆಯ ಭಾವಚಿತ್ರವಾಗಿರುತ್ತದೆ. ನಿ.ಪಿ.5 ಸಿ.ಡಿ. ಆಗಿರುತ್ತದೆ.

14. ನಿ.ಪಿ.1 ಮತ್ತು 2 ರ ದಾಖಲೆಗಳಂತೆ, ದಾವಾ ಐಟಂ 1 ರಲ್ಲಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ಈಗ ಹಾಲಿ ಮದ್ಯದ ಅಂಗಡಿಯನ್ನು ನಡೆಸುತ್ತಿರುವುದಾಗಿ, ಕಂಡು ಬರುತ್ತದೆ. ಈ ಮೊದಲು 1 ನೇ ಪ್ರತಿವಾದಿಯ ಗಂಡ ಅಂದರೆ, 1 ನೇ ವಾದಿಯ ಮಾವನಾದ ಲಕ್ಷ್ಮಿನಾರಾಯಣ ರವರು 1999-2000 ನೇ ಸಾಲಿನಲ್ಲಿ ಅಂದರೆ, ದಿನಾಂಕಃ 30.06.2000 ರವರೆಗೆ ಕಾರ್ಗಲ್ ಪಟ್ಟಣದಲ್ಲಿ ಮದ್ಯವನ್ನು ಮಾರಾಟ ಮಾಡಲು ಅಬಕಾರಿ ಇಲಾಖೆಯಿಂದ ನಿ.ಪಿ.2 ರಂತೆ ಪರವಾನಿಗೆಯನ್ನು ಪಡೆದಿದ್ದರು. ಸದರಿ ಪರವಾನಿಗೆಯ ಅವಧಿ 2000 ನೇ ಸಾಲಿನಲ್ಲಿ ಅಂದರೆ 26

ವರ್ಷಗಳ ಹಿಂದೆ ಕೊನೆಗೊಂಡಿರುತ್ತದೆ ಎಂಬುದು ನಿ.ಪಿ.2 ರ ದಾಖಲೆಯಿಂದ ಕಂಡು ಬರುತ್ತದೆ.

15. ವಾದಿ ಪರ ವಕೀಲರು ತಮ್ಮ ವಾದ ಮಂಡನೆಯಲ್ಲಿ ನಿ.ಪಿ.2 ರ ಪರವಾನಿಗೆಗೆ ವಾದಿಯ ಮಾವ ಹಾಗೂ 1 ನೇ ಪ್ರತಿವಾದಿಯ ಗಂಡನಾಗಿದ್ದ ಲಕ್ಷ್ಮಿ ನಾರಾಯಣರವರು ಪರವಾನಿಗೆಯನ್ನು ಪಡೆದು, ಸದರಿ ಮಧ್ಯದಂಗಡಿಯಿಂದ ಬಂದ ಆದಾಯದ ಮೂಲಕ ಈಗ 1 ನೇ ಪ್ರತಿವಾದಿಯ ಹೆಸರನಲ್ಲಿ ಮಧ್ಯದಂಗಡಿಯನ್ನು ನಡೆಸುತ್ತಿರುವುದಾಗಿ ಮತ್ತು ಸದರಿ ಲಕ್ಷ್ಮಿ ನಾರಾಯಣರವರ ಹೆಸರಿನಲ್ಲಿದ್ದ ಪರವಾನಿಗೆ 1 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆಯಾಗಿದೆ ಎಂಬುದಾಗಿ ಸಾಧನೆ ಮಾಡಿದ್ದಾರೆ. ಆದರೆ, ಯಾವುದೇ ಒಂದು ಸ್ವತ್ತು ಒಟ್ಟು ಕುಟುಂಬದ ಆಸ್ತಿ ಎನಿಸಬೇಕಾದರೆ ಅದು ಒಬ್ಬ ಹಿಂದೂ ಪುರುಷ ಪ್ರಧಾನ ಕುಟುಂಬದಲ್ಲಿ ನಾಲ್ಕು ತಲೆಮಾರಿನಿಂದ ಬಂದಂತಹ ಸ್ವತ್ತಾಗಿರತಕ್ಕದ್ದು.

16. ಈ ಪ್ರಕರಣದಲ್ಲಿ ದಾವಾ ಐಟಂ 1 ರ ಪರವಾನಿಗೆಯ ಅವಧಿ 2000 ನೇ ಸಾಲಿನಲ್ಲಿ ಮುಕ್ತಾಯವಾಗಿರುತ್ತದೆ. ಸಿ.ಎಲ್-2 ಪರವಾನಿಗೆಯನ್ನು ಪಿತ್ರಾರ್ಜಿತ ಆಸ್ತಿಯಾಗಿ ಪರಿಗಣಿಸಲು ಸಾಧ್ಯವಿಲ್ಲ. ಏಕೆಂದರೆ, ಇದು ಸರ್ಕಾರವು ನೀಡುವ ವೈಯಕ್ತಿಕ ಅಥವಾ ಸಂಸ್ಥೆಗೆ ಸಂಬಂಧಪಟ್ಟ ಒಂದು ಪರವಾನಿಗೆಯಾಗಿರುತ್ತದೆ. ಆದರೆ, ಸದರಿ ಸ್ವತ್ತು ಸ್ವಯಂಚಾಲಿತವಾಗಿ ಒಂದು ಸ್ಥಿರ ಆಸ್ತಿಯಂತೆ ಮೂಲ

ಸನ್ನದ್ದುದಾರರ ವಾರಸುದಾರರಿಗೆ ವರ್ಗಾವಣೆಯಾಗುವುದಿಲ್ಲ. ಆದರೆ, ಮೂಲ ಸನ್ನದ್ದುದಾರರು ಹೊಂದಿದ ಪರವಾನಿಗೆಯು ಅವರ ಜೀವಿತ ಅವಧಿಯಲ್ಲಿ ಸದರಿ ಪರವಾನಿಗೆಯ ಕಾಲಾವಧಿಯು ಮುಗಿಯುವ ಮೊದಲೇ ಅದರ ಮೂಲ ಸನ್ನದ್ದುದಾರರು ಒಂದು ವೇಳೆ ಮೃತಪಟ್ಟರೆ, ಕರ್ನಾಟಕ ಅಬಕಾರಿ ಇಲಾಖೆಯ ನಿಯಮಾವಳಿಗಳ ಅನುಸಾರವಾಗಿ ಅವರ ಕಾನೂನುಬದ್ಧ ವಾರಸುದಾರರು ಸದರಿ ಪರವಾನಿಗೆಯನ್ನು ವರ್ಗಾವಣೆ ಪಡೆಯಬಹುದ್ದಾಗಿರುತ್ತದೆ. ಆದರೆ, ಅದನ್ನು ತಲೆತಲಾಂತರಗಳಿಂದ ಬಂದಂತಹ ಸ್ವತ್ತು ಎಂದು ಪರಿಗಣಿಸಿ ಸದರಿ ಪರವಾನಿಗೆಯನ್ನು ಮೃತನ ಕುಟುಂಬದ ವಾರಸುದಾರರ ನಡುವೆ ವಿಭಜನೆಗೊಳಿಸಲು ಸಾಧ್ಯವಿಲ್ಲ. ಆದ್ದರಿಂದ, ದಾವಾ ಐಟಂ 1 ರ ಪರವಾನಿಗೆಯನ್ನು ಕುಟುಂಬದ ಸದಸ್ಯರ ನಡುವೆ ಹಂಚಿಕೊಳ್ಳುವ ಹಕ್ಕು ಈ ಪ್ರಕರಣದ ವಾದಿ ಮತ್ತು ಪ್ರತಿವಾದಿಯರಿಗೆ ಇರುವುದಿಲ್ಲ.

17. ಪ್ರತಿವಾದಿಯರ ಪರವಾಗಿ ದಾವಾ ಐಟಂ 1 ರ ಸ್ವತ್ತಿಗೆ ಸಂಬಂಧಪಟ್ಟಂತೆ, ನಿ.ಡಿ.4 ದಾಖಲೆಯನ್ನು ಹಾಜರುಪಡಿಸಿರುತ್ತಾರೆ. ಸದರಿ ದಾಖಲೆಯಂತೆ, 2025-26 ನೇ ಸಾಲಿಗೆ ಸಂಬಂಧಪಟ್ಟಂತೆ 1 ನೇ ಪ್ರತಿವಾದಿಯು ಮದ್ಯದಂಗಡಿಯನ್ನು ನಡೆಸಲು ಮತ್ತು ಮದ್ಯವನ್ನು ಮಾರಾಟ ಮಾಡಲು ಅಬಕಾರಿ ಇಲಾಖೆಯಿಂದ ಪರವಾನಿಗೆಯನ್ನು ಪಡೆದುಕೊಂಡಿದ್ದು, ಸದರಿ 1 ನೇ ಪ್ರತಿವಾದಿಯ ವೈಯಕ್ತಿಕ

ಹಕ್ಕಿಗೆ ಒಳಪಡುವಂತೆ ಸದರಿ ಪರವಾನಿಗೆಯನ್ನು ನೀಡಿರುತ್ತಾರೆ. ಸದರಿ ಮದ್ಯ ಮಾರಾಟ ಸನ್ನದ್ದು ಪ್ರತಿ ವರ್ಷ ಅಥವಾ ನಿಗದಿತ ಅವಧಿಯ ನಂತರ, ಅದರ ಅವಧಿಯು ಪೂರ್ಣಗೊಳ್ಳುತ್ತದೆ. ಅವಧಿ ಪೂರ್ಣಗೊಂಡ ನಂತರ, ಸದರಿ ಪರವಾನಿಗೆಯನ್ನು ಮುಂದುವರೆಸಲು ನಿಗಧಿತ ಶುಲ್ಕವನ್ನು ಅಬಕಾರಿ ಇಲಾಖೆಗೆ ಪಾವತಿಸಿದ ನಂತರ, ಸನ್ನದ್ದನ್ನು ಒಬ್ಬ ವ್ಯಕ್ತಿಯ ವೈಯಕ್ತಿಕ ಹಕ್ಕಿಗೆ ಒಳಪಡುವ ಮಟ್ಟಿಗೆ ಪರವಾನಿಗೆಯನ್ನು ನೀಡಲಾಗುತ್ತದೆ. ಆದ್ದರಿಂದ, ನಿ.ಪಿ.1 ರ ಸ್ವತ್ತನ್ನು ವಾದಿ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಸ್ವತ್ತು ಎಂದು ಪರಿಗಣಿಸಲು ಸಾಧ್ಯವಿಲ್ಲ.

18. ಪಿ.ಡಬ್ಲ್ಯೂ-1 ರವರು ಸಹ ತಮ್ಮ ಪಾಟೀ ಸವಾಲಿನಲ್ಲಿ ವೈನ್ಸ್ ಸ್ಟೋರ್ ನ್ನು ನಡೆಸಲು ಪ್ರತಿ ವರ್ಷ ಲೈಸನ್ಸ್ ನ್ನು ಪಡೆಯಬೇಕೆನ್ನುವ ಪ್ರತಿವಾದಿ ಪರ ವಕೀಲರ ಪ್ರಶ್ನೆಗೆ, ವರ್ಷಕ್ಕೆ ಇಂತಿಷ್ಟು ಹಣ ಎಂದು ಹಣ ಪಾವತಿಸಬೇಕು ಎಂದು ಒಪ್ಪಿಕೊಂಡಿದ್ದಾರೆ. ಅದೇರೀತಿಯಾಗಿ, ದಾವಾ ಐಟಂ 1 ಸ್ವತ್ತಿಗೆ ತಾನು ಯಾವುದೇ ಶುಲ್ಕವನ್ನು ಪಾವತಿ ಮಾಡಿಲ್ಲ. ಏಕೆಂದರೆ, ಅದನ್ನು 1 ನೇ ಪ್ರತಿವಾದಿ ನಡೆಸುತ್ತಿದ್ದು, ಸದರಿ ಸ್ವತ್ತಿನ ಲೈಸನ್ಸ್ ಈ ದಾವೆ ಹೂಡಿದ ಸಂದರ್ಭದಲ್ಲಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ಮುಂದುವರೆದಿತ್ತು ಎಂಬುದಾಗಿ ಸ್ಪಷ್ಟವಾಗಿ ಒಪ್ಪಿಕೊಂಡಿದ್ದಾರೆ. ಆದಕಾರಣ, ನಿ.ಡಿ.4 ರ ಪರವಾನಿಗೆಯಂತೆ, ಈಗ 1 ನೇ ಪ್ರತಿವಾದಿಯು ದಾವಾ ಐಟಂ 1 ರ ಸ್ವತ್ತಿನ ನಿರೂಪಾಧಿಕ ಮಾಲೀಕಳಾಗಿ, ಸದರಿ ಸನ್ನದ್ದಿನ ಮೇರೆಗೆ ಮದ್ಯವನ್ನು

ಮಾರಾಟ ಮಾಡುತ್ತಿದ್ದಾರೆ. ಆದಕಾರಣ, ಸದರಿ ದಾವಾ ಐಟಂ 1 ರ ಸ್ವತ್ತು ವಾದಿ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಸ್ವತ್ತು ಎಂಬುದನ್ನು ಸಾಕ್ಷ್ಯಾಧಾರಗಳಿಂದ ಸಾಬೀತುಪಡಿಸಲು ವಾದಿಯರು ವಿಫಲರಾಗಿರುತ್ತಾರೆ.

19. ದಾವಾ ಐಟಂ 2 ರ ಸ್ವತ್ತು ನಿವೇಶನವಾಗಿದ್ದು, ಸದರಿ ನಿವೇಶನದಲ್ಲಿ ತಿರುಮಲ ಹೋಟೆಲ್ ಮತ್ತು ರೆಸ್ಟೋರೆಂಟ್ ಎಂದು 2 ನೇ ಪ್ರತಿವಾದಿಯು ಈಗ ಸದರಿ ಹೋಟೆಲ್ ನ್ನು ನಡೆಸುತ್ತಿದ್ದಾರೆ. ವಾದಿಯರು ಹೇಳುವಂತೆ, ಸದರಿ ಸ್ವತ್ತು ತಮ್ಮ ಒಟ್ಟು ಕುಟುಂಬದ ಪಿತ್ರಾರ್ಜಿತ ಸ್ವತ್ತು ಆಗಿರುತ್ತದೆ. ಮೇಲೆ ಈಗಾಗಲೇ ಹೇಳಿದಂತೆ, ದಾವಾ ಐಟಂ 2 ರ ಸ್ವತ್ತು ವಾದಿಯ ಗಂಡ ನಂಜುಂಡ ಹಾಗೂ ಪ್ರತಿವಾದಿಯರ ಕುಟುಂಬದ ಮೂಲ ಪುರುಷ ಮೃತ ಓಬೇಗೌಡನಿಗೆ ನಾಲ್ಕು ತಲೆಮಾರುಗಳಿಂದ ಬಂದಂತಹ ಸ್ವತ್ತು ಆಗಿತ್ತು ಎನ್ನುವ ಬಗ್ಗೆ ಯಾವುದೇ ದಾಖಲೆಗಳನ್ನು ವಾದಿಯರು ಹಾಜರುಪಡಿಸಿರುವುದಿಲ್ಲ.

20. ನಿ.ಪಿ.6 ರಂತೆ ಸದರಿ ದಾವಾ ಐಟಂ 2 ರ ನಿವೇಶನದ ಕ್ರಯಪತ್ರವನ್ನು ವಾದಿಯರು ಹಾಜರುಪಡಿಸಿದ್ದಾರೆ. ಸದರಿ ನಿ.ಪಿ.6 ರಂತೆ ದಿನಾಂಕಃ 05.12.1995 ರಂದು ಸರೋಜಮ್ಮ ಮತ್ತು ಸುಶೀಲಮ್ಮರವರಿಗೆ ಕಾರ್ಗಲ್ ನಲ್ಲಿರುವ ಜೋಗ-ಕಾರ್ಗಲ್ ಅಧಿಸೂಚಿತ ಪ್ರದೇಶದ ಸಮಿತಿಯ ಮುಖ್ಯಾಧಿಕಾರಿಗಳು ಕ್ರಯಪತ್ರವನ್ನು ನೀಡಿರುತ್ತಾರೆ. ಸದರಿ ದಾಖಲೆಯ

ಪ್ರತಿಯನ್ನು ಪ್ರತಿವಾದಿಯರುಾ ಸಹ ನಿ.ಡಿ..2 ರಂತೆ ಹಾಜರುಪಡಿಸಿರುತ್ತಾರೆ. 2 ನೇ ಪ್ರತಿವಾದಿಯು ಹೇಳುವಂತೆ, ದಾವಾ ಐಟಂ 2 ರ ಸ್ವತ್ತನ್ನು ತನ್ನ ಗಂಡ ಪುಟ್ಟಓಬೇಗೌಡನು ವಾದಿಯಿಂದ ಸ್ವತಃ ಖರೀದಿ ಮಾಡಿದ್ದಾನೆ ಎಂಬುದಾಗಿ ಪ್ರತಿರಕ್ಷೆ ತೆಗೆದುಕೊಂಡಿದ್ದಾರೆ. ಆದಕಾರಣ, ಸದರಿ ತನ್ನ ಪ್ರತಿರಕ್ಷೆಗೆ ಸಂಬಂಧಪಟ್ಟಂತೆ ಪ್ರತಿವಾದಿಯರು ನಿ.ಡಿ.1 ರಿಂದ 3 ಮತ್ತು 5 ರಂತೆ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ.

21. ನಿ.ಪಿ.6 ಮತ್ತು ನಿ.ಡಿ.2 ರಂತೆ ದಾವಾ ಐಟಂ 2 ರ ಸ್ವತ್ತು ಮೊದಲು ಸರೋಜಮ್ಮ ಎನ್ನುವವರಿಗೆ ಕಾರ್ಗಲ್ ಪಟ್ಟಣದ ಅಧಿಸೂಚಿತ ಪ್ರದೇಶ ಸಮಿತಿಯ ಮುಖ್ಯಾಧಿಕಾರಿಗಳು ಸೇಲ್ಸ್ ಸರ್ಟಿಫಿಕೇಟ್ ನ ಮೂಲಕ ಕ್ರಯಕ್ಕೆ ನೀಡಿದ್ದರು. ತದನಂತರ, ಸದರಿ ದಾವಾ ಐಟಂ 2 ರ ಸ್ವತ್ತನ್ನು 1 ನೇ ವಾದಿಯು ನಿ.ಡಿ. 3 ರ ಕ್ರಯಪತ್ರದಂತೆ ದಿನಾಂಕಃ 07.11.1998 ರಂದು ಸರೋಜಮ್ಮರವರಿಂದ ಕ್ರಯಕ್ಕೆ ಪಡೆದಿರುತ್ತಾರೆ. ತದನಂತರ, ನಿ.ಡಿ.1 ರ ಕ್ರಯಪತ್ರದಂತೆ, ದಾವಾ ಐಟಂ 2 ರ ಸ್ವತ್ತನ್ನು, ವಾದಿಯು ದಿನಾಂಕಃ 21.05.2003 ರಂದು 2 ನೇ ಪ್ರತಿವಾದಿಯ ಗಂಡ ಪುಟ್ಟಓಬೇಗೌಡನಿಗೆ 11,500/- ರೂ. ಗಳ ಪ್ರತಿಫಲಕ್ಕೆ ಮಾರಾಟ ಮಾಡಿ, ನೋಂದಾಯಿತ ಕ್ರಯಪತ್ರವನ್ನು 2 ನೇ ಪ್ರತಿವಾದಿಯ ಗಂಡನ ಹೆಸರಿಗೆ

ಬರೆದುಕೊಟ್ಟಿರುತ್ತಾರೆ. ಆದರೆ, ಸದರಿ ಸಂಗತಿಯನ್ನು ವಾದಿಯು ತನ್ನ ವಾದಪತ್ರದಲ್ಲಿ ಹೇಳಿರುವುದಿಲ್ಲ.

22. ದಾವಾ ಐಟಂ 2 ರ ಸ್ವತ್ತು ಮೊದಲು, ಈ ದಾವೆಯ 1 ನೇ ವಾದಿಯು ಖರೀದಿ ಮಾಡಿ, ತದನಂತರ, 2 ನೇ ಪ್ರತಿವಾದಿಯ ಗಂಡನಿಗೆ ಮಾರಾಟ ಮಾಡಿರುತ್ತಾರೆ. ಆದಕಾರಣ, ಸದರಿ ದಾವಾ ಐಟಂ 2 ರ ಸ್ವತ್ತನ್ನು 1 ನೇ ವಾದಿಯು ಮಾರಾಟ ಮಾಡಿ, ನಿ.ಡಿ.1 ರಂತೆ ಮಾರಾಟ ಮಾಡಿದ ಕೂಡಲೇ, ಸದರಿ ಸ್ವತ್ತಿನಲ್ಲಿರುವ ವಾದಿಯ ಹಕ್ಕು ನಶಿಸಿ ಹೋಗಿರುತ್ತದೆ. ಆದರೆ, ವಾಸ್ತವ ಸಂಗತಿಯನ್ನು ಮರೆಮಾಚಿ ವಾದಿಯರು ಈ ದಾವೆಯನ್ನು ಸಲ್ಲಿಸಿದ್ದಾರೆ. ದಾವಾ ಐಟಂ 2 ರ ಸ್ವತ್ತನ್ನು ಖರೀದಿ ಮಾಡಿ, ತದನಂತರ, ನಿ.ಡಿ.1 ರಂತೆ 2 ನೇ ಪ್ರತಿವಾದಿಯ ಗಂಡನಿಗೆ ಮಾರಾಟ ಮಾಡಿದ್ದೇನೆ ಎಂಬುದಾಗಿ ಸ್ವತಃ ಒಪ್ಪಿಕೊಂಡಿದ್ದಾರೆ. ಆದರೆ, ಅದನ್ನು ಕ್ರಯಪತ್ರ ಎಂಬುದಾಗಿ ತಾನು ಬರೆದುಕೊಟ್ಟಿಲ್ಲ ಎಂದು ನಿ.ಡಿ.1 ರ ದಾಖಲೆಯಲ್ಲಿನ ಸಂಗತಿಗಳಿಗೆ ವ್ಯತಿರಿಕ್ತವಾಗಿ ತನ್ನ ಹೇಳಿಕೆಯನ್ನು ನೀಡಿರುತ್ತಾರೆ. ಆದಕಾರಣ, ಸದರಿ ಪ್ರತಿರಕ್ಷೆಯನ್ನು ಒಪ್ಪಿಕೊಳ್ಳಲು ಆಗುವುದಿಲ್ಲ ಎಂದು ಅಭಿಪ್ರಾಯಪಟ್ಟು, ದಾವಾ ಐಟಂ 2 ರ ಸ್ವತ್ತು ತಮ್ಮ ಹಾಗೂ ಪ್ರತಿವಾದಿಯರ ಒಟ್ಟು ಕುಟುಂಬದ ಪಿತ್ರಾರ್ಜಿತ ಸ್ವತ್ತು ಎಂಬುದನ್ನು ವಾದಿಯರು

ಸಾಕ್ಷ್ಯಾಧಾರಗಳಿಂದ ಸಾಬೀತುಪಡಿಸಲು ವಿಫಲರಾಗಿದ್ದಾರೆ ಎಂದು ನ್ಯಾಯಾಲಯವು ಅಭಿಪ್ರಾಯಪಟ್ಟಿರುತ್ತದೆ.

23. 2003 ನೇ ಸಾಲಿನಲ್ಲಿ 1 ನೇ ವಾದಿಯು ದಾವಾ ಐಟಂ 2 ರ ಸ್ವತ್ತನ್ನು ನಿ.ಡಿ.1 ರಂತೆ ಮಾರಾಟ ಮಾಡಿದ್ದು, ಸದರಿ ನಿ.ಡಿ1 ರ ಕ್ರಯಪತ್ರವನ್ನು ರದ್ದುಪಡಿಸಲು ಯಾವುದೇ ಪರಿಹಾರವನ್ನು ನ್ಯಾಯಾಲಯದ ಮುಂದೆ ಕೋರಿರುವುದಿಲ್ಲ. ಅದೂಅಲ್ಲದೇ, ಸುಮಾರು 19 ವರ್ಷಗಳ ನಂತರ, ನಿ.ಡಿ.1 ರ ಕ್ರಯಪತ್ರವನ್ನು ತಾನು ಕ್ರಯಪತ್ರವೆಂದು ಬರೆದುಕೊಟ್ಟಿಲ್ಲ ಎಂಬುದಾಗಿ ಪ್ರತಿರಕ್ಷೆ ತೆಗೆದುಕೊಂಡು ಈ ದಾವೆಯನ್ನು ಸಲ್ಲಿಸಿದ್ದಾರೆ. ಸದರಿ 1 ನೇ ವಾದಿಯು ಅನಕ್ಷರಸ್ಥಳಾಗಿರುವುದಿಲ್ಲ. ಅದೇರೀತಿಯಾಗಿ, ನಿ.ಡಿ.1 ರ ಕ್ರಯಪತ್ರವನ್ನು ಮೋಸದಿಂದ ಬರೆಯಿಸಿಕೊಂಡಿದ್ದಾರೆ ಎಂಬುದಾಗಿ, ತನ್ನ ಸಾಕ್ಷಿ ವಿಚಾರಣೆ ಕಾಲಕ್ಕೆ ಹೇಳಿದ್ದಾರೆ. ಆದರೆ, ಸದರಿ ಸಂಗತಿಯನ್ನು ವಾದ ಪತ್ರದಲ್ಲಿ ಹೇಳಿರುವುದಿಲ್ಲ. ಈ ಎಲ್ಲಾ ಸಂಗತಿಗಳನ್ನು ಗಮನಿಸಿದಾಗ, ಸದರಿ ವಾದಿಯು ತನ್ನ ದಾವೆಯಲ್ಲಿ ಹೇಳಿದಂತೆ ದಾವಾ ಐಟಂ 1 ಮತ್ತು 2 ರ ಆಸ್ತಿಗಳು ತನ್ನ ಹಾಗೂ ಪ್ರತಿವಾದಿಯರ ಒಟ್ಟು ಕುಟುಂಬದ ಪಿತ್ರಾರ್ಜಿತ ಆಸ್ತಿಗಳು ಎಂಬುದನ್ನು ಸಾಕ್ಷ್ಯಾಧಾರಗಳಿಂದ ಸಾಬೀತುಪಡಿಸಲು ವಿಫಲರಾಗಿರುತ್ತಾರೆ. ವಾದಿಯು ಪಾಟೀ ಸವಾಲಿನಲ್ಲಿ ನೀಡಿರುವ ಹೇಳಿಕೆಗಳು ಹಾಗೂ 2 ನೇ ಪ್ರತಿವಾದಿಯು ಹಾಜರುಪಡಿಸಿರುವ

ದಾಖಲೆಗಳನ್ನು ಗಮನಿಸಿದಾಗ, ದಾವಾ ಐಟಂ 1 ರ ಸ್ವತ್ತು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದು ಹಾಗೂ ದಾವಾ ಐಟಂ 2 ರ ಸ್ವತ್ತು 2 ಮತ್ತು 5 ನೇ ಪ್ರತಿವಾದಿಯರ ಸ್ವಯಾರ್ಜಿತ ಆಸ್ತಿಗಳು ಎಂಬುದಾಗಿ ಕಂಡು ಬಂದಿರುತ್ತದೆ.

24. ಹಿಂದೂ ಉತ್ತರಾಧಿಕಾರ ಅಧಿನಿಯಮದ ಕಲಂ 14 ರಂತೆ ಯಾವುದೇ ಒಂದು ಸ್ವತ್ತು ಕುಟುಂಬದ ಮಹಿಳೆಯ ಹೆಸರಿಗೆ ಯಾವುದೇ ಮೂಲದಿಂದಾದರೂ ಬಂದಿರಲೀ ಅದು ಅವಳ ಪ್ರತ್ಯೇಕ ಸ್ವತ್ತು ಎಂಬುದಾಗಿ ಪರಿಗಣಿಸತಕ್ಕದ್ದು. ಈ ಪ್ರಕರಣದಲ್ಲಿಯೂ ಸಹ 1 ನೇ ಪ್ರತಿವಾದಿಯ ಗಂಡ ಮೃತಪಟ್ಟ ನಂತರ, ದಿನಾಂಕಃ 30.06.2000 ನೇ ಸಾಲಿನವರೆಗೆ ದಾವಾ ಐಟಂ 1 ರ ಪರವಾನಿಗೆಯನ್ನು 1 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆ ಮಾಡಿರುತ್ತಾರೆ. ತದನಂತರ, ಸದರಿ ಪರವಾನಿಗೆಯನ್ನು ಅದಕ್ಕೆ ಅಗತ್ಯವಿರುವ ಶುಲ್ಕವನ್ನು ತುಂಬಿ, 1 ನೇ ಪ್ರತಿವಾದಿಯು ತನ್ನ ವೈಯಕ್ತಿಕ ಹೆಸರಿಗೆ ಪರವಾನಿಗೆಯನ್ನು ಪಡೆದು, ಸದರಿ ಸ್ವತ್ತಿನಲ್ಲಿ ಈಗ ಮಾರುತಿ ವೈನ್ಸ್ ನಲ್ಲಿ ಎಂಬ ಹೆಸರಿನಲ್ಲಿ ಮದ್ಯದಂಗಡಿಯನ್ನು ನಡೆಸುತ್ತಿದ್ದಾರೆ. ದಾವಾ ಐಟಂ 2 ರ ಸ್ವತ್ತನ್ನು 2 ನೇ ಪ್ರತಿವಾದಿಯ ಗಂಡನಿಗೆ 1 ನೇ ವಾದಿಯು ಮಾರಾಟ ಮಾಡಿರುತ್ತಾರೆ. 2 ನೇ ಪ್ರತಿವಾದಿಯ ಗಂಡ ಪುಟ್ಟಓಬೇಗೌಡನು ಮೃತಪಟ್ಟ ನಂತರ, ಅವನ ಕಾನೂನುಬದ್ಧ ವಾರಸುದಾರರಾದ 1, 2 ಮತ್ತು 5 ನೇ ಪ್ರತಿವಾದಿಯರು ಸದರಿ ದಾವಾ ಐಟಂ 2 ರ ಸ್ವತ್ತಿಗೆ ಮಾಲೀಕರಾಗುತ್ತಾರೆ. ನಿ.ಡಿ.5

ರ ದಾಖಲೆಯಂತೆ ದಾವಾ ಐಟಂ 2 ರ ಸ್ವತ್ತು ಈಗ 2 ನೇ ಪ್ರತಿವಾದಿಯಹೆಸರಿನಲ್ಲಿ ಮುಂದುವರೆದಿರುತ್ತದೆ. ಆದಕಾರಣ, ಈ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ, ದಾವಾ ಐಟಂ 1 ಮತ್ತು 2 ರ ಸ್ವತ್ತುಗಳು 1 ಮತ್ತು 2 ನೇ ಪ್ರತಿವಾದಿಯರ ಸ್ವಯಾರ್ಜಿತ ಸ್ವತ್ತುಗಳು ಎಂಬುದಾಗಿ ಸಾಬೀತಾಗಿರುತ್ತದೆ. ಆದ್ದರಿಂದ, ಮೇಲಿನ ವಿವಾದಾಂಶ 1 ನ್ನು **ನಕಾರಾತ್ಮಕವಾಗಿ** ಹಾಗೂ ವಿವಾದಾಂಶ 2 ಮತ್ತು 3 ನ್ನು **ಸಕಾರಾತ್ಮಕವಾಗಿ** ಉತ್ತರಿಸುತ್ತೇನೆ.

25. **ವಿವಾದಾಂಶ 4**: ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರದಲ್ಲಿ ಈ ದಾವೆಯನ್ನು ನಿಗದಿತ ಕಾಲಾವಧಿಯಲ್ಲಿ ಸಲ್ಲಿಸಿಲ್ಲ ಎಂಬುದಾಗಿ ಹಾಗೂ ಸದರಿ ವಾದಿಯರ ದಾವೆಗೆ ಅವಧಿ ಬಾಧಕವಿದೆ ಎಂಬುದಾಗಿ ಪ್ರತಿರಕ್ಷೆ ತೆಗೆದುಕೊಂಡಿದ್ದಾರೆ. ಈ ದಾವೆಯಲ್ಲಿ ಸದರಿ ವಾದಿಯರು ನಿ.ಡಿ.1 ರ ಕ್ರಯಪತ್ರದ ರದ್ಧತಿ ಕೋರಿ ಯಾವುದೇ ಪರಿಹಾರವನ್ನು ಕೇಳಿರುವುದಿಲ್ಲ. ಸದರಿ ದಾವೆಯನ್ನು ಪಾಲು ವಿಭಾಗ ಹಾಗೂ ಪ್ರತ್ಯೇಕ ಸ್ವಾಧೀನಕ್ಕಾಗಿ ಸಲ್ಲಿಸಿರುತ್ತಾರೆ. ಸಾಮಾನ್ಯವಾಗಿ, ಕುಟುಂಬದ ಯಾವುದೇ ಒಬ್ಬ ಸದಸ್ಯನು ಒಟ್ಟು ಕುಟುಂಬದಲ್ಲಿ ಮುಂದುವರೆಯಲು ತನಗೆ ಇಚ್ಛೆ ಇಲ್ಲವಾದರೆ, ವಿಭಾಗಕ್ಕಾಗಿ ತಾನು ಯಾವುದೇ ಸಂದರ್ಭದಲ್ಲಿ ದಾವೆಯನ್ನು ದಾಖಲು ಮಾಡಬಹುದಾಗಿರುತ್ತದೆ. ಆದಕಾರಣ, ಸದರಿ ಪ್ರತಿವಾದಿಯರು ಹೇಳುವಂತೆ ಪ್ರಸ್ತುತ ದಾವೆಗೆ ಅವಾಧಿ ಬಾಧಕವಿದೆ ಎಂಬ

ಪ್ರತಿರಕ್ಷೆಯನ್ನು ಒಪ್ಪಿಕೊಳ್ಳಲು ಆಗುವುದಿಲ್ಲ. ಆದಕಾರಣ, ಸದರಿ ವಿವಾದಾಂಶ 4 ನ್ನು **ನಕಾರಾತ್ಮಕವಾಗಿ** ಉತ್ತರಿಸುತ್ತೇನೆ.

26. **ವಿವಾದಾಂಶ 5:** ದಾವಾ ಸ್ವತ್ತುಗಳು ವಾದಿ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಪಿತ್ರಾರ್ಜಿತ ಸ್ವತ್ತುಗಳನ್ನು ಸಾಬೀತುಪಡಿಸಲು ವಾದಿಯರು ವಿಫಲರಾಗಿರುತ್ತಾರೆ. ಅದೇರೀತಿಯಾಗಿ, ದಾವಾ ಐಟಂ 1 ಮತ್ತು 2 ರ ಸ್ವತ್ತುಗಳು ಅನುಕ್ರಮವಾಗಿ 1 ಮತ್ತು 2 ನೇ ಪ್ರತಿವಾದಿಯರ ಸ್ವಯಾರ್ಜಿತ ಸ್ವತ್ತುಗಳು ಎಂಬುದನ್ನು ಸಾಕ್ಷ್ಯಾಧಾರಗಳಿಂದ ಸದರಿ ಪ್ರತಿವಾದಿಯರು ಸಾಬೀತುಪಡಿಸಿದ್ದಾರೆ. ಆದಕಾರಣ, ವಿಭಾಗಕ್ಕಾಗಿ ಯಾವುದೇ ಸ್ವತ್ತುಗಳು ಲಭ್ಯವಿಲ್ಲದ ಕಾರಣ ದಾವೆಯಲ್ಲಿ ಕೋರಿದ ಯಾವುದೇ ಪರಿಹಾರಕ್ಕೆ ವಾದಿಯರು ಅರ್ಹರಾಗಿಲ್ಲ ಎಂಬುದಾಗಿ ಅಭಿಪ್ರಾಯಪಟ್ಟು, ವಿವಾದಾಂಶ 5 ನ್ನು **ನಕಾರಾತ್ಮಕವಾಗಿ** ಉತ್ತರಿಸುತ್ತೇನೆ.

27. **ವಿವಾದಾಂಶ 6:**- ಈ ಮೇಲ್ಕಂಡ ವಿವಾದಾಂಶ 1 ರಿಂದ 5 ರಲ್ಲಿ ಚರ್ಚಿಸಿರುವ ಕಾರಣಗಳಿಗಾಗಿ ಈ ಕೆಳಕಂಡಂತೆಃ

## ಆದೇಶ

ವಾದಿಯರ ಈ ದಾವೆಯನ್ನು ವೆಚ್ಚಗಳ ಸಹಿತ ವಜಾಗೊಳಿಸಲಾಗಿದೆ.

ತೀರ್ಪಿನಂತೆ ಡಿಕ್ರಿ ಬರೆಯಲು ಕಛೇರಿಗೆ ನಿರ್ದೇಶಿಸಿದೆ.

*(ಶೀಘ್ರಲಿಪಿಗಾರರಿಗೆ ನೇರವಾಗಿ ಕಂಪ್ಯೂಟರಿನಲ್ಲಿ ಬೆರಳಚ್ಚು ಮಾಡಿಸಿ ನಂತರ ಅದನ್ನು ಓದಿ, ತಿದ್ದುಪಡಿ ಮಾಡಿ ಈ ದಿನ ಅಂದರೆ, 1ನೇ ಆಗಸ್ಟ್ 2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದ್ದೇನೆ.)*

(**ಮಾದೇಶ ಎಂ.ವಿ.,**)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಾಗರ.

## ಅನುಬಂಧ

**ವಾದಿಯರ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ:**

ಪಿ.ಡಬ್ಲ್ಯೂ.1 : ಶಾಂತಮ್ಮ ಕೋಂ ನಂಜುಂಡಪ್ಪ ಯಾನೆ ನಂಜುಂಡ.

**ವಾದಿಯರ ಪರ ಗುರುತಿಸಲ್ಪಟ್ಟ ದಾಖಲೆಗಳ ಪಟ್ಟಿ:**

ನಿ.ಪಿ.1 : ನಮೂನೆ-6.

ನಿ.ಪಿ.2 : ಸಿ.ಎಲ್. 2 ಸನ್ನದು.

ನಿ.ಪಿ.3 : ವೈನ್ ಶಾಪಿನ ಫೋಟೋ.

ನಿ.ಪಿ.4 : ವೈಕುಂಠ ಸಮಾರಾಧನೆ ಫೋಟೋ.

ನಿ.ಪಿ.5 : ಸಿ.ಡಿ.

ನಿ.ಪಿ.6 : ನಿವೇಶನ ವಿಕ್ರಯ ಪತ್ರ.

ನಿ.ಪಿ.7 ಮತ್ತು 8 : ಮರಣ ಪ್ರಮಾಣ ಪತ್ರಗಳು.

**ಪ್ರತಿವಾದಿಯರ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ:**

ಡಿಡಬ್ಲ್ಯೂ-1 : ಸುಜಾತ ಕೋಂ ಪುಟ್ಟ ಓಬೇಗೌಡ.

**ಪ್ರತಿವಾದಿಯರ ಪರ ಗುರುತಿಸಲ್ಪಟ್ಟ ದಾಖಲೆಗಳ ಪಟ್ಟಿ:**

ನಿ.ಡಿ.1 : ಕ್ರಯಪತ್ರ.

ನಿ.ಡಿ.2 ಮತ್ತು 3 : ಕ್ರಯಪತ್ರಗಳ ದೃಢೀಕೃತ ನಕಲುಗಳು.

ನಿ.ಡಿ.4 : ನಮೂನೆ ಸಿ.ಎಲ್.2 ರ ಗಣಕೀಕೃತ ನಕಲು.

ನಿ.ಡಿ.5 : ನಮೂನೆ-3 ನಿಯಮ 20.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಾಗರ.**